# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **23** |
| ಸದಸ್ಯರ ಹೆಸರು | : | ಶ್ರೀ ಸುನೀಲ್ ವಲ್ಯಾಪುರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 09-12-2024 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಗೃಹಜ್ಯೋತಿ ಯೋಜನೆಯಲ್ಲಿ ಎಷ್ಟು ಯೂನಿಟ್ ಉಚಿತ ಕರೆಂಟ್ ನೀಡಲಾಗುತ್ತಿದೆ; (ಸಂಪೂರ್ಣ ಮಾಹಿತಿ ನೀಡುವುದು) | • ಸರ್ಕಾರದ ಆದೇಶ ಸಂಖ್ಯೆ ಎನರ್ಜಿ/164/ಪಿಎಸ್‌ಆರ್/2023 ದಿನಾಂಕ: 05.06.2023. ರ ಅನ್ವಯ "ಗೃಹ ಜ್ಯೋತಿ" ಯೋಜನೆಯನ್ನು ದಿನಾಂಕ: 01.07.2023 ರಿಂದ ಜಾರಿಗೆ ಬರುವಂತೆ ಅನುಷ್ಠಾನಗೊಳಿಸಲಾಗಿದೆ.<br>• "ಗೃಹ ಜ್ಯೋತಿ" ಯೋಜನೆಯಡಿ ರಾಜ್ಯದಲ್ಲಿನ ಪ್ರತಿ ಗ್ರಾಹಕರ 2022-23 ರ ಸರಾಸರಿ ಬಳಕೆಯ ಆಧಾರದನ್ವಯ ಯೂನಿಟ್‌ಗಳ ಮೇಲೆ ಶೇಕಡ 10 ರಷ್ಟು ಹೆಚ್ಚಿನ ವಿದ್ಯುತ್ ಬಳಕೆಯನ್ನು ಅರ್ಹತಾ ವಿದ್ಯುತ್ ಯೂನಿಟ್‌ಗಳೆಂದು ನಿಗದಿಪಡಿಸಿ, ಪ್ರತಿ ತಿಂಗಳಿಗೆ ಗರಿಷ್ಟ 200 ಯೂನಿಟ್‌ಗಳವರೆಗಿನ ವಿದ್ಯುತ್ ಬಿಲ್ಲಿನ ಮೊತ್ತವನ್ನು ಸರ್ಕಾರವು ಸಹಾಯಧನದ ಮೂಲಕ ಪಾವತಿಸುತ್ತದೆ.<br>• "ಗೃಹ ಜ್ಯೋತಿ" ಯೋಜನೆಯ ಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ "ಭಾಗ್ಯಜ್ಯೋತಿ" ಮತ್ತು "ಕುಟೀರಜ್ಯೋತಿ" ಯೋಜನೆಯಡಿ ಮಾಸಿಕ 40 ಯೂನಿಟ್‌ಗಳ ಉಚಿತ ವಿದ್ಯುತ್ ಮಿತಿಯನ್ನು ರಾಜ್ಯದ ಸರಾಸರಿ 53 ಯೂನಿಟ್ + ಶೇ.10 ರಷ್ಟು ಹೆಚ್ಚಿಸಿ ಮಾಸಿಕ 58 ಅರ್ಹತಾ ವಿದ್ಯುತ್ ಯೂನಿಟ್‌ಗಳೆಂದು ನಿಗದಿಪಡಿಸಿ, "ಗೃಹ ಜ್ಯೋತಿ" ಯೋಜನೆಯಡಿ ಸೇರ್ಪಡಿಸಿ, ಅರ್ಹ ಗ್ರಾಹಕರಿಗೆ ನೀಡಲಾಗುತ್ತಿದೆ.<br>• ಅಮೃತ ಜ್ಯೋತಿ ಯೋಜನೆಯಡಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಬಿ.ಪಿ.ಎಲ್ ಕುಟುಂಬಗಳಿಗೆ ನಿಗಧಿಯಾಗಿದ್ದ ಮಾಸಿಕ 75 ಯೂನಿಟ್‌ಗಳವರೆಗಿನ ವಿದ್ಯುತ್ ಮಿತಿಯನ್ನು ಶೇ.10 ರಷ್ಟು ಹೆಚ್ಚಿಸಿ, ಮಾಸಿಕ 83 ಅರ್ಹತಾ ವಿದ್ಯುತ್ ಯೂನಿಟ್‌ಗಳೆಂದು ನಿಗದಿಪಡಿಸಿ, "ಗೃಹ ಜ್ಯೋತಿ" ಯೋಜನೆಯಡಿ ಸೇರ್ಪಡಿಸಿದೆ.<br>• ಹೊಸದಾಗಿ ಸಂಪರ್ಕ ಪಡೆದ ಗೃಹ ಬಳಕೆದಾರರ ಮಾಸಿಕ ಅರ್ಹ ಯೂನಿಟ್‌ಗಳನ್ನು ನಿಗದಿಪಡಿಸಲು 12 ತಿಂಗಳ ಬಳಕೆಯ ಮಾಹಿತಿಯು ಲಭ್ಯತೆ ಇಲ್ಲದಿದ್ದಲ್ಲಿ, ಸದರಿ ಗೃಹ ಬಳಕೆದಾರರಿಗೆ ರಾಜ್ಯದ ಗೃಹ ಬಳಕೆದಾರರ ಸರಾಸರಿ ಬಳಕೆಯ ಮಾಸಿಕ 53 ಯೂನಿಟ್‌ಗಳು ಮತ್ತು ಶೇ.10 ರಷ್ಟು ಹೆಚ್ಚಿಸಿ, ಮಾಸಿಕ 58 ಅರ್ಹ ಯೂನಿಟ್‌ಗಳನ್ನಾಗಿ ನಿಗಧಿಪಡಿಸಿ ಗ್ರಾಹಕರಿಗೆ ಈ ಯೋಜನೆಯ ಸೌಲಭ್ಯವನ್ನು ವಿಸ್ತರಿಸಲಾಗಿದೆ. |

| | | |
|---|---|---|
| | | • "ಗೃಹ ಜ್ಯೋತಿ" ಯೋಜನೆಯಡಿ ಗೃಹ ಬಳಕೆಯ ಸ್ಥಾವರಗಳಲ್ಲಿ ಮಾಸಿಕ 48 ಯೂನಿಟ್‌ಗಳಿಗಿಂತ ಕಡಿಮೆ ಬಳಸುವ ಗ್ರಾಹಕರಿಗೆ ಹೆಚ್ಚುವರಿ ಶೇ.10 ರ ಬದಲಾಗಿ ಹೆಚ್ಚುವರಿ 10 ಯೂನಿಟ್‌ಗಳನ್ನು ಒಟ್ಟಾರೆಯಾಗಿ 58 ಅರ್ಹತಾ ವಿದ್ಯುತ್ ಯೂನಿಟ್‌ಗಳನ್ನು ನಿಗದಿಪಡಿಸಿ, ದಿನಾಂಕ: 01.02.2024 ರಿಂದ ಜಾರಿಗೆ ಬರುವಂತೆ ಅನುಷ್ಠಾನಗೊಳಿಸಲಾಗಿದೆ. |
| ಆ) | ಈ ಯೋಜನೆಗೆ ಪ್ರತಿ ತಿಂಗಳು ಬಳಕೆಯಾಗುತ್ತಿರುವ ವಿದ್ಯುತ್ ಎಷ್ಟು; ಅದಕ್ಕೆ ತಗಲುತ್ತಿರುವ ವೆಚ್ಚವೆಷ್ಟು; | ಗೃಹಜ್ಯೋತಿ ಯೋಜನೆಗೆ ಪ್ರತಿ ತಿಂಗಳು ಬಳಕೆಯಾಗುತ್ತಿರುವ ವಿದ್ಯುತ್ ಪ್ರಮಾಣ ಮತ್ತು ಅದಕ್ಕೆ ತಗಲುವ ವೆಚ್ಚಗಳನ್ನು ಮತ್ತು ವಿದ್ಯುತ್ ಸರಬರಾಜು ಕಂಪನಿಗಳಿಗೆ ಆಗಸ್ಟ್-2023ರಿಂದ ಅಕ್ಟೋಬರ್-2024ರವರೆಗೆ ಸರ್ಕಾರದಿಂದ ಬಿಡುಗಡೆಗೊಳಿ ಸಲಾದ ಅನುದಾನದ ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ. |
| ಇ) | ಗೃಹಜ್ಯೋತಿ ಯೋಜನೆಯಲ್ಲಿ ಯಾವ ಯಾವ ನಿಗಮಗಳಿಗೆ ಎಷ್ಟು ಅನುದಾನ ನೀಡಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು) | |
| ಈ) | ಈ ಗೃಹಜ್ಯೋತಿ ಯೋಜನೆಯಡಿಯಲ್ಲಿ ನೋಂದಣಿ ಮಾಡಿಕೊಂಡಿರುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಸಮುದಾಯಗಳಿಗೆ ಒಳಪಡುವ ಬಳಕೆದಾರರು ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ಗೃಹಜ್ಯೋತಿ ಯೋಜನೆಯನ್ನು ರಾಜ್ಯದಲ್ಲಿನ ಎಲ್ಲಾ ಪ್ರವರ್ಗದ ಗೃಹ ಬಳಕೆ ಗ್ರಾಹಕರ ಸೌಲಭ್ಯಕ್ಕಾಗಿ ಅನುಷ್ಠಾನಗೊಳಿಸಲಾಗಿರುತ್ತದೆ. ಈ ಯೋಜನೆಯ ಸೌಲಭ್ಯಕ್ಕಾಗಿ ನೊಂದಾಯಿಸುವ ಫಲಾನುಭವಿಗಳು ಸೇವಾ ಸಿಂಧು ತಂತ್ರಾಂಶದಲ್ಲಿ ನೊಂದಣಿ ಮಾಡಬೇಕಾಗಿದ್ದು, ಸದರಿ ನೊಂದಣಿ ಅರ್ಜಿಯಲ್ಲಿ ಮಾಹಿತಿಯನ್ನು ಸರಳೀಕರಣಗೊಳಿಸುವ ಸಲುವಾಗಿ ಪ್ರತ್ಯೇಕವಾಗಿ ಜಾತಿವಾರು ಮಾಹಿತಿಯ ಅಂಕಣ (Column) ನಮೂದಿಸಿರುವುದಿಲ್ಲ. ಹೊಸದಾಗಿ ವಿದ್ಯುತ್ ಸಂಪರ್ಕ ಪಡೆಯುವ ಸಂದರ್ಭದಲ್ಲಿಯೂ ಸಹ ಜಾತಿವಾರು ವಿವರಗಳ ಮಾಹಿತಿ ಸಂಗ್ರಹಿಸಲ್ಪಡದಿರುವುದರಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳ ನಿರ್ದಿಷ್ಟ ಅಂಕಿ-ಅಂಶಗಳು ಲಭ್ಯವಿರುವುದಿಲ್ಲ. |
| ಉ) | ರೈತರು ತಮ್ಮ ಜಮೀನಿಗೆ ಟ್ರಾನ್ಸ್‌ಫಾರಂ ಅಳವಡಿಸಲು ಸರ್ಕಾರಕ್ಕೆ ಕಟ್ಟಬೇಕಾದ ಹಣ ಎಷ್ಟು; ಅದರ ಮಾನದಂಡಗಳೇನು? | ರಾಜ್ಯದಲ್ಲಿ ನೀರಾವರಿ ಪಂಪ್ ಸೆಟ್ ಗಳನ್ನು ವಿದ್ಯುತ್ ಜಾಲಕ್ಕೆ ವ್ಯವಸ್ಥಿತವಾಗಿ ಸೇರ್ಪಡೆಗೊಳಿಸಲು ಮತ್ತು Stand-alone/off gird ಪಂಪ್ ಅಳವಡಿಕೆ ಹಾಗೂ IP set feeder ಗಳ ಸೌರೀಕರಣವನ್ನು ಅನುಷ್ಠಾನಗೊಳಿಸಿ ರೈತರ ಪಂಪ್ ಸೆಟ್‌ಗಳಿಗೆ ಹಗಲಿನ ವೇಳೆಯಲ್ಲಿಯೇ ವಿದ್ಯುತ್ ಒದಗಿಸುವ ನಿಟ್ಟಿನಲ್ಲಿ ಎನರ್ಜಿ ವಿಎಸ್‌ಸಿ/214/2023, ದಿನಾಂಕ: 07.10.2023 ರಂದು ಆದೇಶವನ್ನು ಹೊರಡಿಸಲಾಗಿದ್ದು, ಅದರಂತೆ, ಪಂಪ್ ಸೆಟ್‌ಗಳು ಹಾಲಿ ಇರುವ ವಿದ್ಯುತ್ ಜಾಲದಿಂದ 500 ಮೀಟರ್ ಯಿಂದಾಚೆಯಿದ್ದಲ್ಲಿ Solar Stand-alone/off grid ಪಂಪ್ ಅಳವಡಿಸಲು ಕ್ರಮ ವಹಿಸಲಾಗುತ್ತಿದೆ ಮತ್ತು 500 ಮೀಟರ್ ಒಳಗಿರುವ ಪಂಪ್‌ಸೆಟ್‌ಗಳಿಗೆ ಕನಿಷ್ಟ ಅವಶ್ಯಕತೆಗೆ ತಕ್ಕಂತೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ವಿದ್ಯುತ್ ಸರಬರಾಜು ಕಂಪನಿಗಳು ಕ್ರಮವಹಿಸುತ್ತವೆ. |

| | | |
|---|---|---|
| | | ಸೌರ ಪಂಪ್ ಸೆಟ್‌ಗಳನ್ನು ಉತ್ತೇಜಿಸಲು ಕೇಂದ್ರ ಸರ್ಕಾರದಿಂದ ಶೇ. 30 ರಷ್ಟು ಸಹಾಯಧನ ಅಲ್ಲದೆ ರಾಜ್ಯ ಸರ್ಕಾರದಿಂದ ಶೇ. 30 ರಷ್ಟು ಇರುವ ಸಹಾಯ ಧನವನ್ನು ಶೇ. 50 ಕ್ಕೆ ಹೆಚ್ಚಿಸಿ ಸರ್ಕಾರ ಅನುಮೋದಿಸಿದೆ. ರೈತರು ಈಗಾಗಲೇ ವಿದ್ಯುತ್ ಸಂಪರ್ಕಕ್ಕಾಗಿ ಮತ್ತವನ್ನು ಪಾವತಿಸಿದ್ದರೆ, ಪಾವತಿಸಿದ ಮೊತ್ತವನ್ನು ರೈತರ ವಂತಿಗೆ ಎಂದು ಪರಿಗಣಿಸಿ, ಸೌರ ಪಂಪ್ ಸೆಟ್‌ಗಳನ್ನು ಅಳವಡಿಸಬೇಕಾಗಿದೆ.<br><br>ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಗಳಿಗನುಗುಣವಾಗಿ ಸಂಪರ್ಕ ಕಲ್ಪಿಸಲು ಕ್ರಮವಹಿಸಲಾಗುವುದು. |

ಸಂಖ್ಯೆ: ಎನರ್ಜಿ 327 ಇಬಿಎಸ್ 2024

**(ಕೆ.ಜೆ.ಜಾರ್ಜ್)**
**ಇಂಧನ ಸಚಿವರು**

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸುನೀಲ್ ವಲ್ಯಾಪುರ್ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 23ಕ್ಕೆ ಅನುಬಂಧ**

**ಗೃಹಜ್ಯೋತಿ ಯೋಜನೆಯಡಿಯಲ್ಲಿ ಬಳಕೆಯಾದ ವಿದ್ಯುತ್ ಪ್ರಮಾಣ, ತಗುಲಿರುವ ವೆಚ್ಚ ಮತ್ತು ಸರ್ಕಾರದಿಂದ ಬಿಡುಗಡೆಯಾದ ಅನುದಾನದ ಮೊತ್ತದ ವಿದ್ಯುತ್ ಸರಬರಾಜು ಕಂಪನಿವಾರು ವಿವರಗಳು:-**

| ತಿಂಗಳು/ವರ್ಷ | ಬೆಸ್ಕಾಂ | | | ಮೆಸ್ಕಾಂ | | | ಸೆಸ್ಕ್ | | | ಹೆಸ್ಕಾಂ | | | ಜೆಸ್ಕಾಂ | | |
|---|---|---|---|---|---|---|---|---|---|---|---|---|---|---|---|
| | ಬಳಕೆಯಾದ ವಿದ್ಯುತ್ ಪ್ರಮಾಣ (ಮಿ.ಯೂ. ಗಳಲ್ಲಿ) | ತಗಲುವ ವೆಚ್ಚ (ರೂ.ಕೋಟಿ ಗಳಲ್ಲಿ) | ಬಿಡುಗಡೆ ಯಾದ ಅನುದಾನ (ರೂ. ಕೋಟಿ ಗಳಲ್ಲಿ) | ಬಳಕೆಯಾದ ವಿದ್ಯುತ್ ಪ್ರಮಾಣ (ಮಿ.ಯೂ. ಗಳಲ್ಲಿ) | ತಗಲುವ ವೆಚ್ಚ (ರೂ.ಕೋಟಿ ಗಳಲ್ಲಿ) | ಬಿಡುಗಡೆ ಯಾದ ಅನುದಾನ (ರೂ. ಕೋಟಿ ಗಳಲ್ಲಿ) | ಬಳಕೆಯಾದ ವಿದ್ಯುತ್ ಪ್ರಮಾಣ (ಮಿ.ಯೂ. ಗಳಲ್ಲಿ) | ತಗಲುವ ವೆಚ್ಚ (ರೂ.ಕೋಟಿ ಗಳಲ್ಲಿ) | ಬಿಡುಗಡೆ ಯಾದ ಅನುದಾನ (ರೂ. ಕೋಟಿ ಗಳಲ್ಲಿ) | ಬಳಕೆಯಾದ ವಿದ್ಯುತ್ ಪ್ರಮಾಣ (ಮಿ.ಯೂ. ಗಳಲ್ಲಿ) | ತಗಲುವ ವೆಚ್ಚ (ರೂ.ಕೋಟಿ ಗಳಲ್ಲಿ) | ಬಿಡುಗಡೆ ಯಾದ ಅನುದಾನ (ರೂ. ಕೋಟಿ ಗಳಲ್ಲಿ) | ಬಳಕೆಯಾದ ವಿದ್ಯುತ್ ಪ್ರಮಾಣ (ಮಿ.ಯೂ. ಗಳಲ್ಲಿ) | ತಗಲುವ ವೆಚ್ಚ (ರೂ.ಕೋಟಿ ಗಳಲ್ಲಿ) | ಬಿಡುಗಡೆ ಯಾದ ಅನುದಾನ (ರೂ. ಕೋಟಿ ಗಳಲ್ಲಿ) |
| ಆಗಸ್ಟ್ 23 | 276.96 | 308.50 | 321.00 | 74.39 | 69.55 | 72.00 | 79.05 | 72.20 | 70.00 | 99.21 | 113.42 | 112.00 | 84.0.04 | 78.27 | 73.00 |
| ಸೆಪ್ಟೆಂಬರ್ 23 | 328.81 | 338.95 | 335.00 | 85.78 | 83.28 | 74.00 | 86.38 | 79.69 | 110.00 | 119.76 | 133.52 | 137.00 | 86.97 | 89.21 | 92.00 |
| ಅಕ್ಟೋಬರ್ 23 | 346.26 | 353.05 | 360.00 | 83.83 | 82.32 | 74.00 | 84.29 | 79.36 | 85.00 | 122.80 | 133.82 | 137.00 | 89.47 | 92.64 | 92.00 |
| ನವೆಂಬರ್ 23 | 350.42 | 333.55 | 360.00 | 89.71 | 79.67 | 74.00 | 89.43 | 81.57 | 85.00 | 127.88 | 130.71 | 137.00 | 91.28 | 85.94 | 92.00 |
| ಡಿಸೆಂಬರ್ 23 | 348.40 | 328.85 | 360.00 | 103.42 | 80.39 | 74.00 | 87.55 | 75.77 | 85.00 | 125.87 | 126.89 | 137.00 | 90.01 | 85.12 | 92.00 |
| ಜನವರಿ 24 | 346.69 | 310.44 | 360.00 | 134.24 | 76.19 | 74.00 | 87.58 | 71.29 | 85.00 | 122.19 | 115.36 | 137.00 | 84.92 | 76.13 | 92.00 |
| ಫೆಬ್ರುವರಿ 24 | 355.23 | 328.31 | 234.00 | 145.25 | 80.14 | 114.00 | 88.81 | 78.21 | 34.00 | 125.42 | 116.39 | 196.00 | 90.41 | 85.31 | 90.00 |
| ಮಾರ್ಚ್ 24 | 365.47 | 332.19 | 442.00 | 138.33 | 79.72 | 83.00 | 90.60 | 77.82 | 76.00 | 129.88 | 124.26 | 100.00 | 99.03 | 86.12 | 52.00 |
| ಏಪ್ರಿಲ್ 24 | 369.05 | 345.69 | 370.00 | 146.22 | 82.01 | 86.00 | 102.04 | 84.20 | 86.00 | 138.09 | 129.77 | 151.00 | 93.35 | 87.59 | 106.00 |
| ಮೇ 24 | 360.32 | 346.69 | 370.00 | 149.49 | 86.35 | 86.00 | 104.65 | 93.01 | 86.00 | 138.09 | 143.31 | 151.00 | 100.62 | 90.19 | 106.00 |
| ಜೂನ್ 24 | 370.83 | 356.16 | 371.00 | 151.64 | 86.19 | 86.00 | 99.39 | 95.29 | 86.00 | 138.49 | 143.61 | 151.00 | 102.14 | 97.38 | 106.00 |
| ಜುಲೈ 24 | 375.34 | 362.14 | 250.00 | 157.69 | 87.88 | 75.00 | 101.02 | 90.89 | 75.00 | 133.42 | 140.35 | 133.22 | 109.81 | 103.26 | 70.00 |
| ಆಗಸ್ಟ್ 24 | 369.77 | 362.59 | 270.00 | 153.64 | 85.53 | 80.00 | 97.88 | 89.61 | 94.00 | 130.86 | 136.75 | 120.00 | 112.65 | 108.78 | 80.00 |
| ಸೆಪ್ಟೆಂಬರ್ 24 | 375.23 | 368.57 | 316.25 | 161.11 | 90.14 | 84.93 | 103.93 | 91.84 | 112.30 | 136.49 | 137.35 | 100.38 | 112.45 | 108.86 | 84.30 |
| ಅಕ್ಟೋಬರ್ 24 | 377.24 | 352.46 | 370.00 | 163.22 | 90.25 | 95.00 | 102.16 | 91.32 | 100.00 | 133.27 | 143.48 | 110.00 | 113.06 | 106.18 | 127.73 |
| **ಒಟ್ಟು** | **5316.02** | **5128.14** | **5089.25** | **1937.96** | **1239.61** | **1231.93** | **1404.76** | **1252.07** | **1269.30** | **1921.72** | **1968.99** | **2009.60** | **1376.17** | **1380.98** | **1355.03** |